ಶ್ರೀ ಕೆ.ಪೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ತುಮಕೂರಿನಲ್ಲಿರುವ ಸಿದ್ಧಗಂಗಾ ತಾಂತ್ರಿಕ ಸಂಸ್ಥೆಯ ವಿದ್ಯಾರ್ಥಿಗಳ ಮೇಲೆ ದೌರ್ಜನ್ಯ ಹಾಗೂ ಹಿಂಸೆಯ ಬಗ್ಗೆ ಮಾನ್ಯ ಗೃಹ ಮಂತ್ರಿಯವರ ಗಮನಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹಮಂತ್ರಿಗಳು).—ಇದನ್ನು ಆಮೇಲೆ ತಗದುಕೊಳ್ಳೋಣ. ಕಾಫಿ ಮಾಡುವುದಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಬಂದ ಮೇಲೆ ಕೊಡುತ್ತೇನೆ.

ನಿಯಮ ೩೫೯ರ ಮೇರೆಗೆ

ಹೊಸನಗರದಲ್ಲಿ ರಂಗಮಂದಿರವನ್ನು ನಿರ್ಮಿಸುವ ಬಗ್ಗೆ

ಅಧ್ಯಕ್ಷರು.—ಸ್ವಾಮಿರಾವ್ ನಿಮ್ಮದೇ ಮೊದಲ ಅವಕಾಶ ಹೇಳಿ.

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅಧ್ಯಕ್ಷರೇ, ಹೊಸನಗರ ತಾಲ್ಲೂಕಿನ ಬಹು ಭಾಗ ಲಿಂಗನಮಕ್ಕಿ ಚಿಕ್ಕ, ಸಾವೆಹಕ್ಕಲು. ವರಾಹಿ ಯೋಜನೆಯಿಂದಾಗಿ ತಾಲ್ಲೂಕಿನ ಪ್ರಾಪ್ತಿ ಕಡಿಮೆಯಾಗಿ ಆಳಿದು-ಉಳಿದು-ಇರುವ ಹೊಸನಗರದಲ್ಲಿ ಯಾವ ಅಭಿವೃದ್ಧಿಯೂ ಆಗದೇ ಇರುವುದನ್ನು ಸರ ಏರ ಗಮನಿಸಿ ೨ ಲಕ್ಷ ರೂಪಾಯಿ ಅಂದಾಜಿನ ಒಂದು ರಂಗ ಮಂದಿರವನ್ನು ಹೊಸನಗರದಲ್ಲಿ ನಿರ್ಮಿಸಬೇಕೆಂದು ಇದರ ಖರ್ಚು ವೆಚ್ಚವನ್ನು ಕೆ.ಇ.ಬಿ. ಹೈ ಪವರ್ ಕಮಿಟಿ ಭರಿಸಬೇಕೆಂದು ನಿರ್ಮಾಣವಾಗುವ ರಂಗ ಮಂದಿರಕ್ಕೆ ದಿವಂಗತ ಗೋಪಾಲಗೌಡ ರಂಗ ಮಂದಿರ ಎಂದು ಹೆಸರು ಇಡಬೇಕೆಂದು ತೀರ್ಮಾನಿಸಿ ಈವರೆವಿಗೂ ಯಾವ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಈ ವಿಷಯವನ್ನು ಸದನದ ಮೂಲಕ ಸರಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರವನ್ನು ತರಿಸಿ ಅವರಿಗೆ ಕೊಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಸಂಬಂಧಪಟ್ಟ ಮಂತ್ರಿ ಎಂದರೆ ಯಾರು ಎಂದು ಗೊತ್ತಾಗಲಿಲ್ಲ.

ಅಧ್ಯಕ್ಷರು.—ರಾಮಪ್ಪ, ಬಳ್ಳಾರಿ ನೀವು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಂಬಂಧಪಟ್ಟ ಮಂತ್ರಿಗಳು ಅವರಿಗೆ ಉತ್ತರ ಕೊಡಲಿ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಅವರು ಕೇಳಿರತಕ್ಕಂಥದ್ದು, ರಂಗಮಂದಿರವನ್ನು ಕಟ್ಟಿಸಬೇಕು ಎಂದು ಹೇಳಿದ್ದಾರೆ. ಅದರ ಜೊತೆಗೆ ಕೆ.ಇ.ಬಿ. ಹೈ ಲೆವೆಲ್ ಕಮಿಟಿ ಅದರ ಖರ್ಚು ವೆಚ್ಚವನ್ನು ಭರಿಸಬೇಕೆಂದು ಸೂಚನೆಯನ್ನು ಕೊಟ್ಟಿದ್ದಾರೆ. ಈ ಕೆಲಸ ಆಗಬೇಕಾಗಿರುವುದು ಯುವಜನ ಸೇವಾ ಇಲಾಖೆ ಮತ್ತು ಕನ್ನಡ ಕಲ್ಚರ್ ಇಲಾಖೆಯಿಂದ. ಈ ಇಲಾಖೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಸಂಬಂಧಪಟ್ಟ ಮಂತ್ರಿಗಳು. ಆದರಿಂದ ಈ ಪ್ರಶ್ನೆಗೆ ಉತ್ತರವನ್ನು ತರಿಸಿಕೊಡುತ್ತೇನೆ ಎಂದು ಹೇಳಿದ್ದೇನೆ. ಮಾನ್ಯ ಸದಸ್ಯರು ಯಾವ ಮಂತ್ರಿಗಳಿಂದ ಅವರು ಉತ್ತರವನ್ನು ಬಯಸುತ್ತಾರೋ ಅದನ್ನೂ ಕೂಡ ಹೇಳಿದರೆ ಒಳ್ಳೆಯದು.

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ.....

ಅಧ್ಯಕ್ಷರು.—ಈ ರೀತಿ ಮಾತನಾಡುವುದಕ್ಕೆ ಇದರಲ್ಲಿ ಬರುವುದಿಲ್ಲ. ದಯವಿಟ್ಟು ಕೂರಿ.

(2) Construction of Acquiduct on Hagri Riverat High level Channel of Thungabhadra

ಶ್ರೀ ಪಿ. ರತ್ನಾಕರ್ (ಶ್ರೀ ಎಂ. ರಾಮಪ್ಪ ಇವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಬಳ್ಳಾರಿ ತಾಲ್ಲೂಕಿನ ತುಂಗಭದ್ರ ಹೈ ಲೆವೆಲ್ ಚನ್ನಾಲ್‌ದಿಂದ ಹೆಗ್ರಿ ನದಿಯ ಮೇಲೆ ಕಟ್ಟಲಾಗುವ ಆಕ್ವಿಡೇಟ್ ಮಂಜೂರಾಗಿ ಸ್ವಲ್ಪ ಕೆಲಸ ಮಾಡಿ ಅರ್ಧಕ್ಕೆ ಬಿಟ್ಟು ೩-೪ ವರ್ಷಗಳು ಆಗಿವೆ. ಇದರ ಕೆಲಸ ನಡೆಯುತ್ತಿಲ್ಲ. ಈ ಯೋಜನೆಯಿಂದ ಬರಗಾಲ ಬಿದ್ದಿರುವ ಪ್ರದೇಶವಾದ ರೂಪನಗೂಡಿ, ಮಾಳಾಪಿ, ಕ್ಯಾಗ್ಲಲು, ಪಿ.ಡಿ. ಹಳ್ಳಿ, ಸುಮಾರು ೧೫.೨೦ ಹಳ್ಳಿಯೊಳಗೆ ನೀರು ಕೊಡುವ ಅತೀ ಮುಖ್ಯವಾದ ಕಾಮಗಾರಿ ನಿಂತಿರುವುದರಿಂದ ಆ ಭಾಗದ ಜನರಿಗೆ ತೊಂದರೆಯಾಗುವುದರ ಜೊತೆಗೆ ಸರಕಾರಕ್ಕೂ